

ಚಿತ್ರ : ೨೩

ನಿಮ್ಮನ್ನು ಸಂಬೋಧಿಸಲು ನನಗೆ ಅನುಮತಿ ನೀಡಿ. ಹೌದು, ಹಿಂದುವು ನಿಮ್ಮನ್ನು ಪಾಪಿಗಳೆಂದು ಕರೆಯಲು ನಿರಾಕರಿಸುತ್ತಾನೆ. ನೀವು ಭಗವಂತನ ಪುತ್ರರು, ಅಮೃತಾನಂದದಲ್ಲಿ ಭಾಗಿಗಳು. ನೀವು ಪವಿತ್ರರು, ನೀವು ಪರಿಪೂರ್ಣರು."

**ಛಾಯಾಚಿತ್ರ – ೨೪**

ಈ ಚಿತ್ರದಲ್ಲಿ **"ಹೇ ದೇವರೇ, ನೀನೊಬ್ಬನೇ ಪ್ರಪಂಚದ ಐಶ್ವರ್ಯ – ವಿವೇಕಾನಂದ"** ಎಂಬ ಇಂಗ್ಲಿಷ್ ಸಂದೇಶದ ಜೊತೆ, ಇಂಗ್ಲಿಷ್‌ನಲ್ಲಿಯೇ ಸ್ವಾಮೀಜಿಯವರ ಹಸ್ತಾಕ್ಷರವೂ ಇದೆ.



ಚಿತ್ರ : ೨೪

"ಮೇಲೆದ್ದು ಬನ್ನಿ ಓ ಸಿಂಹಗಳೇ, ನೀವು ಕುರಿಯೆಂಬ ಭ್ರಾಂತಿಯನ್ನು ಕೊಡವಿಹಾಕಿ. ನೀವು ಪ್ರಕೃತಿಯಲ್ಲ, ನೀವು ದೇಹವಲ್ಲ, ನೀವು ಪವಿತ್ರರು, ನೀವು ಪರಿಪೂರ್ಣರು" ಎಂಬ ಉಪನಿಷತ್ತಿನ ತೂರ್ಯವಾಣಿಯನ್ನು ಸ್ವಾಮೀಜಿ ಸರ್ವಧರ್ಮ ಸಮ್ಮೇಳನದಲ್ಲಿ ಸಾರಿದರು.

**ಛಾಯಾಚಿತ್ರ – ೨೫**

**'ತ್ವಮೇವ ಮಾತಾ ಚ ಪಿತಾ ತ್ವಮೇವ, ತ್ವಮೇವ ಬಂಧುಶ್ಚ ಸಖಾ ತ್ವಮೇವ'** ಎಂಬ ಸಂಸ್ಕೃತ ಶ್ಲೋಕವಿದೆ. ಅದರ ಅರ್ಥ ಹೀಗೆ: "ನೀನೇ ತಾಯಿ, ನೀನೇ ತಂದೆ, ನೀನೇ ಬಂಧು, ನೀನೇ ಸ್ನೇಹಿತ." ಸ್ವಾಮೀಜಿ ಈ ಚಿತ್ರದ ಮೇಲೆ ಈ ಸಂದೇಶವನ್ನು ಇಂಗ್ಲಿಷ್‌ನಲ್ಲಿ ಬರೆದು 'ಸ್ವಾಮಿ ವಿವೇಕಾನಂದ' ಎಂದು ಸಹಿ ಮಾಡಿದ್ದಾರೆ.

ಛಾಯಾಗ್ರಾಹಕ ಹ್ಯಾರಿಸನ್‌ನಿಂದ ಸ್ವಾಮೀಜಿ ಇದರ ಸುಮಾರು ೫೦ ಪ್ರತಿಗಳನ್ನು ತರಿಸಿದ್ದರು. ಈ ಚಿತ್ರದ ಪ್ರತಿಗಳನ್ನು ಅವರು ಖೇತ್ರಿಯ ಮಹಾರಾಜರಾದ ಅಜಿತ್ ಸಿಂಗ್, ಮೈಸೂರಿನ ಮಹಾರಾಜರಾದ ಚಾಮರಾಜ ಒಡೆಯರ್ ಮುಂತಾದ ಆಪ್ತರಿಗೆ ಕಳುಹಿಸಿಕೊಟ್ಟಿದ್ದರು. ಶ್ರೀಮತಿ ಹೇಲ್ ಮತ್ತಿತರ ಸ್ವಾಮೀಜಿಯವರ ಅಮೆರಿಕದ ಆಪ್ತವಲಯದವರು ಕೂಡ ಇದರ ಕೆಲವು ಪ್ರತಿಗಳನ್ನು ಪಡೆದುಕೊಂಡಿದ್ದರು. ✪



ಚಿತ್ರ : ೨೫




# ಚಿರಸ್ಮರಣೀಯವಾದ ದಿವ್ಯ, ಭವ್ಯ
# ಭಾರತೀಯ ಆಧ್ಯಾತ್ಮಿಕ ಸಮ್ಮಿಲನ

## ಸಮ್ಮಿಲನದ ಪ್ರೇರಣಾಶಕ್ತಿ

**ಭಾ**ರತೀಯ ಪರಂಪರೆ ಎನ್ನುವುದು ಸುಭದ್ರವಾದ ಆಧ್ಯಾತ್ಮಿಕತೆಯನ್ನು ಅಂತರಂಗದಲ್ಲಿ ಹೊಂದಿರುವ ಒಂದು ಶ್ರೀಮಂತ ಸಂಸ್ಕೃತಿಯ ಇತಿಹಾಸ. ಮಹಾನ್ ದ್ರಷ್ಟಾರರೂ, ಆಧುನಿಕ ಯುಗದ ಪ್ರವಾದಿಯೂ ಆದ ಸ್ವಾಮಿ ವಿವೇಕಾನಂದರು ಈ ಆಧ್ಯಾತ್ಮಿಕತೆಯ ಸಾಕಾರ ಸ್ವರೂಪರಾಗಿದ್ದರು. ಪ್ರಾಚೀನ ಮತ್ತು ವರ್ತಮಾನಗಳಲ್ಲಿನ ಉತ್ಕೃಷ್ಟವಾದ ಅಂಶಗಳ ಸಾಮರಸ್ಯವನ್ನು ಸಾಧಿಸುವ ಮೂಲಕ, ಭಾರತೀಯ ಪರಂಪರೆ ಹಾಗೂ ಆಧ್ಯಾತ್ಮಿಕ ಜ್ಞಾನದ ನಿರಂತರ ಪ್ರಸ್ತುತತೆಯನ್ನು ಅವರು ಅನಾವರಣಗೊಳಿಸಿದರು. ಸರ್ವರಿಗೂ ಆರ್ಥಿಕ ಸೌಖ್ಯ ಮತ್ತು ಸಾಮಾಜಿಕ ನ್ಯಾಯ ಲಭಿಸಿ, ಬದುಕನ್ನು ಸಾರ್ಥಕಗೊಳಿಸಿಕೊಳ್ಳುವ ಸಮಗ್ರತೆಯ ದರ್ಶನದ ಒಂದು ಹೊಸ ದಿಗಂತವನ್ನೇ ಮನುಕುಲದ ಮುಂದೆ ಸ್ವಾಮಿ ವಿವೇಕಾನಂದರು ತೆರೆದಿಟ್ಟರು. ಅವರನ್ನು ಸರ್ವಧರ್ಮಗಳ ಹಾಗೂ ಸರ್ವಭಾವಗಳ ಸಮನ್ವಯಚಾರ್ಯರೆಂದು ಪರಿಗಣಿಸಿ ಭಾರತದ ಪುನರುತ್ಥಾನದ ಕಾರಣಪುರುಷರೆಂದು ಇತಿಹಾಸಕಾರರು ಗುರುತಿಸಿರುವುದು ಔಚಿತ್ಯಪೂರ್ಣವಾಗಿಯೇ ಇದೆ.

ಹೀಗಾಗಿ ಸ್ವಾಮಿ ವಿವೇಕಾನಂದರ ೧೫೦ನೆಯ ಜಯಂತಿ ಹೆಚ್ಚಿನ ಮಹತ್ವವನ್ನು ಪಡೆಯುತ್ತದೆ. ಇಂತಹ ಒಂದು ಅಭೂತಪೂರ್ವ ಉತ್ಸವವನ್ನು ರಾಮಕೃಷ್ಣ ಆಂದೋಲನದೊಂದಿಗೆ ಗುರುತಿಸಿಕೊಂಡವರು ಮಾತ್ರವಲ್ಲದೆ, ಭಾರತದ ಹಾಗೂ ಜಗತ್ತಿನ ಇತರ ಭಾಗಗಳ ಜನರೂ ವಿಜೃಂಭಣೆಯಿಂದ ಆಚರಿಸುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದ ಉತ್ಸವಗಳು ೨೦೧೩-೨೦೧೪ರಲ್ಲಿ ನಡೆಯುತ್ತವೆ. ಆದರೂ ರಾಮಕೃಷ್ಣ ಮಹಾಸಂಘವು ೨೦೧೦ ರಿಂದಲೇ ಈ ಮಹೋತ್ಸವವನ್ನು ಪ್ರಾರಂಭಿಸಿ ಸ್ವಾಮೀಜಿಯವರ ಹೃದಯಕ್ಕೆ ಹತ್ತಿರವಾಗಿದ್ದ, ಬಡಜನರ ಉದ್ಧಾರಕ್ಕೆ ಸಂಬಂಧಿಸಿದಂತಹ ಯೋಜನೆಗಳನ್ನು ತನ್ನ ಶಾಖಾ ಕೇಂದ್ರಗಳ ಮೂಲಕ ಕಾರ್ಯಗತಗೊಳಿಸಲು ಉದ್ಯುಕ್ತವಾಗಿದೆ. ಈ ಯೋಜನೆಯ ಕಾರ್ಯಕ್ರಮಗಳು ಮೂರು ಕ್ಷೇತ್ರಗಳಿಗೆ ಸಂಬಂಧಿಸಿವೆ:

**೧. ಬಡವರು, ಹಿಂದುಳಿದವರು - ಅದರಲ್ಲೂ ಗ್ರಾಮಾಂತರ ಪ್ರದೇಶದವರಿಗೆ ನೆರವು ನೀಡುವುದು ೨. ಮಾನವನ ದಿವ್ಯತೆ, ಧಾರ್ಮಿಕ ಸಾಮರಸ್ಯ, ಮಾನವಸೇವೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಸ್ವಾಮಿ ವಿವೇಕಾನಂದರ ಸಂದೇಶಗಳ ಪ್ರಸಾರ** ಮತ್ತು **೩. ಮೌಲ್ಯಾಧಾರಿತ ಶಿಕ್ಷಣ ಪದ್ಧತಿಯ ಅಳವಡಿಕೆ.**

ರಾಷ್ಟ್ರಾದ್ಯಂತ ನಡೆಯುತ್ತಿರುವ ಈ ಮೂರು ಬಗೆಯ ಕಾರ್ಯಕ್ರಮಗಳಲ್ಲಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಏಪ್ರಿಲ್ ೨೦ ರಿಂದ ೨೩ರವರೆಗೆ ಆಯೋಜಿಸಿದ್ದ **'ಭಾರತೀಯ ಆಧ್ಯಾತ್ಮಿಕ ಸಮ್ಮಿಲನ'**ವೂ ಒಂದಾಗಿದೆ. ಈ ಸಮ್ಮಿಲನದ ಮುಖ್ಯ ಉದ್ದೇಶವೆಂದರೆ ಅನೇಕ ಹಿಂದೂ ಸಂಪ್ರದಾಯಗಳು ಇಂದು ಎದುರಿಸಬೇಕಾಗಿರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವುದು. ಈ ನಿಟ್ಟಿನಲ್ಲಿ ಕರ್ನಾಟಕ, ಕೇರಳ, ಆಂಧ್ರಪ್ರದೇಶ ಮತ್ತು ತಮಿಳುನಾಡು - ಈ ಎಲ್ಲ ಪ್ರಾಂತ್ಯಗಳ ಹಲವಾರು ಸಂನ್ಯಾಸಿಗಳು ಮತ್ತು ಆಧ್ಯಾತ್ಮಿಕ ಸಂಸ್ಥೆಗಳ ಮುಖ್ಯಸ್ಥರು ಈ ಸಮ್ಮಿಲನದಲ್ಲಿ ಒಂದುಗೂಡಿ, ಭಾರತದ ಆಧ್ಯಾತ್ಮಿಕ ಸಂಸ್ಕೃತಿಯು ಇಂದು ಎದುರಿಸುತ್ತಿರುವ ಹಲವಾರು ಬಗೆಯ ಸಮಸ್ಯೆಗಳು ಮತ್ತು ಪರಿಹಾರಗಳ ಚಿಂತನ - ಮಂಥನವನ್ನು ಮಾಡಿದರು. ಅಭೂತಪೂರ್ವವಾಗಿದ್ದ ಈ ಐತಿಹಾಸಿಕ ಬೃಹತ್ ಸಮ್ಮೇಳನದಲ್ಲಿ ೨೫೦೦ಕ್ಕೂ ಹೆಚ್ಚಿನ ಭಕ್ತರು, ಹಿತೈಷಿಗಳು ಆಗಮಿಸಿದ್ದರು. ಈ ಮಹಾನ್ ಸಮಾವೇಶದ ರತ್ನಪ್ರಾಯರಾಗಿ ೨೦೦ಕ್ಕೂ ಹೆಚ್ಚು ಸಾಧು ಬ್ರಹ್ಮಚಾರಿಗಳ ದಿವ್ಯ ಸನ್ನಿಧಾನ ಏರ್ಪಟ್ಟಿತ್ತು. ಹೀಗಾಗಿ ಈ ಮಹೋತ್ಸವ ನಡೆದ ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಪ್ರಾಂಗಣದಲ್ಲಿ ಪವಿತ್ರತೆ, ತ್ಯಾಗ, ಸಮರ್ಪಣೆ ಹಾಗೂ ಭಕ್ತಿ-ಶ್ರದ್ಧೆಗಳು ಅಪೂರ್ವವಾಗಿ ಮಿಲನಗೊಂಡ ದಿವ್ಯ ವಾತಾವರಣವು ನೆಲೆಗೊಂಡಿತ್ತು.




ವೇದಿಕೆಯ ವಿಹಂಗಮ ನೋಟ


## ೨೦–೪–೨೦೧೨ : ಉದ್ಘಾಟನಾ ಸಮಾರಂಭ

ಇಂದು ಬೆಳಗಿನ ಜಾವದಿಂದಲೇ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಮತ್ತು ದೇಶದ ವಿವಿಧೆಡೆಗಳಿಂದ ಆಗಮಿಸುತ್ತಿದ್ದ ನೂರಾರು ಸಂನ್ಯಾಸಿಗಳು ಒಟ್ಟುಗೂಡಲಾರಂಭಿಸಿದರು. ಮಧ್ಯಾಹ್ನ ೩.೩೦ರ ಹೊತ್ತಿಗೆ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಕ್ರೀಡಾಂಗಣದಲ್ಲಿ ನಿರ್ಮಿಸಲಾಗಿದ್ದ ಬೃಹದ್ 'ಸ್ವಾಮಿ ವಿವೇಕಾನಂದ ಸಭಾಂಗಣ'ವು ಸಂನ್ಯಾಸಿಗಳು ಮತ್ತು ಭಕ್ತ ಹಿತೈಷಿಗಳಿಂದ ತುಂಬಿತುಳುಕುತ್ತಿತ್ತು. ಬೇಸಿಗೆಯ ಬೇಗೆಯ ಮಧ್ಯದಲ್ಲೂ ಸಂತಸ ಸಂಭ್ರಮಗಳ ಉತ್ಸವದ ವಾತಾವರಣ ಅಲ್ಲಿ ನಲಿದಾಡುತ್ತಿತ್ತು. ಸರಿಯಾಗಿ ೩.೪೫ಕ್ಕೆ ಸ್ವಾಮಿ ಪ್ರಜ್ಞಾತ್ಮಾನಂದಜಿ ಅವರ ಸುಮಧುರ ಭಜನೆಯೊಂದಿಗೆ ಈ ಐತಿಹಾಸಿಕ ಸಮ್ಮಿಲನವು ಶುಭಾರಂಭ ಗೊಂಡಿತು. ವೇದಘೋಷದ ನಂತರ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಅವರು ನೆರೆದ ಸಮಸ್ತರನ್ನೂ ಆದರದಿಂದ ಸ್ವಾಗತಿಸಿ, ಈ ಆಧ್ಯಾತ್ಮಿಕ ಸಮ್ಮಿಲನದ ಉದ್ದೇಶವನ್ನು ಪರಿಚಯಿಸಿದರು. ಅನಂತರ ರಾಮಕೃಷ್ಣ ಮಹಾ ಸಂಘದ ಟ್ರಸ್ಟಿಗಳಲ್ಲಿ ಒಬ್ಬರೂ, ಚೆನ್ನೈನ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರೂ ಆದ ಪೂಜ್ಯ ಸ್ವಾಮಿ ಗೌತಮಾನಂದಜಿ ಅವರು ಜ್ಯೋತಿ ಬೆಳಗಿಸುವ ಮೂಲಕ ಸಮ್ಮಿಲನವನ್ನು ಉದ್ಘಾಟಿಸಿ



ಸಮ್ಮಿಲನದ ಉದ್ಘಾಟನೆ

ದರು. ಇದೇ ಸಂದರ್ಭದಲ್ಲಿ, 'ಭಾರತೀಯ ಆಧ್ಯಾತ್ಮಿಕ ಸಮ್ಮಿಲನ'ದ ಸವಿನೆನಪಿಗಾಗಿ ಹೊರತರಲಾದ **'ವಿವೇಕ ಜಾಗೃತಿ'** ಎಂಬ ಹೆಸರಿನ ಸ್ಮರಣಸಂಚಿಕೆಯನ್ನು ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ, ಸುತ್ತೂರು ಮಠ – ಇವರು ಬಿಡುಗಡೆ ಮಾಡಿದರು.



ಸ್ಮರಣ ಸಂಚಿಕೆಯ ಬಿಡುಗಡೆ

ಹಾಗೆಯೇ ಮೈಸೂರು ಆಶ್ರಮದ ನೂತನ ಪ್ರಕಟಣೆಗಳಾದ, **'ಭಾರತೀಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆ: ಸವಾಲುಗಳು ಮತ್ತು ಪರಿಹಾರ – ಸ್ವಾಮಿ ವಿವೇಕಾನಂದ'** ಮತ್ತು **'ನಿತ್ಯ ಜೀವನದಲ್ಲಿ ಧರ್ಮದ ಅನುಷ್ಠಾನದ ಆವಶ್ಯಕತೆ'** ಗ್ರಂಥಗಳನ್ನು ಕ್ರಮವಾಗಿ ಸಮಾ ರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಪೂಜ್ಯ ಸ್ವಾಮಿ ಸುರೇಶಾನಂದಜಿ ಮತ್ತು ಉದ್ಘಾಟನಾ ಭಾಷಣ ಮಾಡಿದ ಸ್ವಾಮಿ ಗೌತಮಾನಂದಜಿ ಬಿಡುಗಡೆ ಮಾಡಿದರು. "ಆಧ್ಯಾತ್ಮಿಕ ಪುನರುಜ್ಜೀವನದ ಸಂಕಲ್ಪ ಶಕ್ತಿಯು ಜಗತ್ತಿನ ಅಶಾಂತಿ, ಅಜ್ಞಾನಗಳನ್ನು ತೊಡೆದು ಹಾಕ ಬಲ್ಲದು. ಇದಕ್ಕಾಗಿ ಯುವಶಕ್ತಿ ಸಿಡಿದೇಳಬೇಕಾಗಿದೆ" ಎಂದು ಈ ಸಂದರ್ಭದಲ್ಲಿ ಪೂಜ್ಯ ಸುತ್ತೂರು ಮಠದ ಸ್ವಾಮೀಜಿ ನುಡಿದರು. ಪೂಜ್ಯ ಸ್ವಾಮಿ ಗೌತಮಾನಂದಜಿ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ, "ವಿವೇಕಾನಂದರು ಸನಾತನ ಹಿಂದೂಧರ್ಮದ ಸಮರ್ಥ ರಾಯಭಾರಿಯಾಗಿದ್ದರು. ಎಲ್ಲಕ್ಕಿಂತ ಮಾನವತಾ ಧರ್ಮವೇ ಹೆಚ್ಚೆಂದು ಪ್ರತಿಪಾದಿಸಿದ ಅವರು, ಆಧ್ಯಾತ್ಮಿಕ ಕ್ರಾಂತಿ ಯಿಂದ ಮಾತ್ರವೇ ನವಭಾರತದ ನಿರ್ಮಾಣ ಸಾಧ್ಯ ಎಂದು ತಿಳಿಸಿದರು" ಎಂಬ ಅಂಶವನ್ನು ಮನದಟ್ಟುಮಾಡಿಕೊಟ್ಟರು. ಅಂದು ರಾತ್ರಿ ನಡೆದ ವಿಶಿಷ್ಟ ಸಮಾರಂಭದಲ್ಲಿ, ಶ್ರೀರಾಮಕೃಷ್ಣ

ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿಯಾದ ಶ್ರೀ ಎಂ.ಪಿ. ಕಾರ್ತಿಕ್ ಅವರು ನಿರ್ದೇಶಿಸಿರುವ **'ವಿವೇಕಾನಂದ ಕಂಡಂತೆ ವಿವೇಕಾನಂದ'** ಎಂಬ ಚಲನಚಿತ್ರವನ್ನು ಕರ್ನಾಟಕ ಸರ್ಕಾರದ ಮಂತ್ರಿಗಳಾದ ಶ್ರೀ ಎಸ್. ಎ. ರಾಮದಾಸ್ ಅವರು ಬಿಡುಗಡೆ ಮಾಡಿದರು, ಈ ಸಂದರ್ಭದಲ್ಲಿ ಈ ಚಲನಚಿತ್ರದ ಕಲಾವಿದರನ್ನು ಸನ್ಮಾನಿಸಲಾಯಿತು; ಚಲನಚಿತ್ರದ ಪ್ರದರ್ಶನವೂ ಜರುಗಿತು.

## ೨೧-೪-೨೦೧೨ :
## ಎರಡನೆಯ ದಿನದ ಕಾರ್ಯಕ್ರಮ

ಮೈಸೂರಿನ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನವಿದು. ಅಂದು ಬೆಳಗ್ಗೆ ಆರು ಗಂಟೆಗೇ ಸಹಸ್ರಾರು ಸಂಖ್ಯೆಯಲ್ಲಿ ಸಾಧು, ಬ್ರಹ್ಮಚಾರಿಗಳು ಮತ್ತು ಭಕ್ತರು, ಹಿತೈಷಿಗಳು ಚೆಲುವಾಂಬಾ ಉದ್ಯಾನವನದಲ್ಲಿರುವ ಸ್ವಾಮಿ ವಿವೇಕಾನಂದರ ಪ್ರತಿಮೆಯ ಬಳಿ ಒಂದುಗೂಡಿದ್ದರು. ಗಣ್ಯ ಸ್ವಾಮೀಜಿಯವರುಗಳಿಂದ ಸ್ವಾಮೀಜಿಯ ಪ್ರತಿಮೆಗೆ ಪೂಜೆ, ಮಾಲಾರ್ಪಣೆ ಮತ್ತು ಆರತಿಗಳು ಜರುಗಿದುವು. ತದನಂತರ ಸ್ವಾಮಿ ವಿವೇಕಾನಂದರ ಎರಡು ಪ್ರತಿಮೆಗಳನ್ನು ಮುಂದಿಟ್ಟುಕೊಂಡು, ಸಮಾಜಪುರುಷನ ಎರಡು ಕಣ್ಣುಗಳಾದ ಸಾಧುಗಳು ಮತ್ತು ಗೃಹಸ್ಥರೆಲ್ಲರೂ, ಸ್ವಾಮಿ ವಿವೇಕಾನಂದರಿಗೆ ಜಯಕಾರವನ್ನು ಹಾಕುತ್ತ, ಹರ್ಷೋದ್ಗಾರಗಳೊಂದಿಗೆ, ಸಮೀಪದಲ್ಲಿರುವ ಶ್ರೀ ಲಕ್ಷ್ಮೀವೆಂಕಟೇಶ್ವರ ಸ್ವಾಮಿ ದೇವಸ್ಥಾನಕ್ಕೆ ತೆರಳಿದರು. ಮಾರ್ಗಮಧ್ಯದಲ್ಲಿ ಶ್ರೀರಾಮಕೃಷ್ಣ



ಶೋಭಾಯಾತ್ರೆಯ ಸೊಗಸು

ಆಶ್ರಮದಲ್ಲಿ ದಿವ್ಯತ್ರಯರಿಗೆ ಪುಷ್ಪಾಂಜಲಿಯನ್ನೂ ಸಮರ್ಪಿಸಲಾಯಿತು. ವೆಂಕಟೇಶ್ವರ ದೇವಸ್ಥಾನದ ಗರುಡಗಂಭದ ಎದುರಿಗೆ, ಮಂಗಳ ಸಮಾರಂಭವೊಂದು ಜರುಗಿತು. ಅದರಲ್ಲಿ ಸಮಾಜದ ಉಪೇಕ್ಷಿತ ಬಂಧುಗಳು ಕೂಡ ನೂರಾರು ಸಂಖ್ಯೆಯಲ್ಲಿ



ದೇವಸ್ಥಾನದಲ್ಲಿ ಸಾಧುಗಳು

ಪಾಲ್ಗೊಂಡಿದ್ದರು. ಪೂಜ್ಯ ಸ್ವಾಮಿ ಸುರೇಶಾನಂದಜಿ, ಪೂಜ್ಯ ಸ್ವಾಮಿ ಹರ್ಷಾನಂದಜಿ, ಪೂಜ್ಯ ಸ್ವಾಮಿ ಗೌತಮಾನಂದಜಿ ಮತ್ತು ಪರಕಾಲ ಮಠಾಧೀಶರಾದ ಪೂಜ್ಯ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಸ್ವಾಮೀಜಿ ಇದರಲ್ಲಿ ಪಾಲ್ಗೊಂಡು, ಸಾಮಾಜಿಕ ಏಕತೆಯನ್ನೂ, ಭಗವಂತನ ಅನುಗ್ರಹದ ವಿಶ್ವವ್ಯಾಪಕತೆಯನ್ನೂ ನೆರೆದಿದ್ದ ಸಭಿಕರಲ್ಲಿ ಬಿಂಬಿಸಿದರು. ಹಾಗೆಯೇ ಭಗವನ್ನಾಮವನ್ನು ಪೂಜ್ಯ ಸ್ವಾಮಿ ಗೌತಮಾನಂದಜಿ ಮತ್ತು ಪೂಜ್ಯ ಪರಕಾಲ ಮಠಾಧೀಶರು ಎಲ್ಲರಿಗೂ ಬೋಧಿಸಿದರು. ಹಿಂದೂ ಸಮಾಜದ ಐಕ್ಯತೆಯ ಸಾಕ್ಷಾತ್ ಪ್ರದರ್ಶನದಂತೆ ಇದ್ದ ಈ ಅಪೂರ್ವ ಸನ್ನಿವೇಶದಲ್ಲಿ ಬಡ ಉಪೇಕ್ಷಿತ ಸಮಾಜ ಬಂಧುಗಳ **'ನಾರಾಯಣ ಸೇವೆ'**ಯೂ ನಡೆಯಿತು. **'ದೀನದಲಿತರೇ ನಿಮ್ಮ ದೇವತೆಗಳಾಗಲಿ'** ಎಂಬ ಸ್ವಾಮಿ ವಿವೇಕಾನಂದರ ಆಶಯಕ್ಕೆ ಅಪೂರ್ವ ದೃಶ್ಯರೂಪವನ್ನು ತಂದುಕೊಟ್ಟ ಒಂದು ಸುಭಗ ಸುಂದರ ಸನ್ನಿವೇಶ ಇದಾಗಿತ್ತು.



ದೇವಸ್ಥಾನದ ವೇದಿಕೆಯಲ್ಲಿ ಗಣ್ಯರು

ತದನಂತರ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ **'ಸನಾತನ ಧರ್ಮ ಮತ್ತು ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಅದರ ಪುನರುಜ್ಜೀವನ'** ಎಂಬ ವಿಷಯವಾಗಿ



ದೇವಸ್ಥಾನದಲ್ಲಿ ಭಕ್ತರು




ಮೂರನೆಯ ಅಧಿವೇಶನ

ಮೊದಲ ಅಧಿವೇಶನ ನಡೆಯಿತು. ಪೂಜ್ಯ ಸ್ವಾಮಿ ಹರ್ಷಾನಂದಜಿ ಅವರು ಅಧ್ಯಕ್ಷತೆ ವಹಿಸಿದ್ದರು. ಪೂಜ್ಯ ಸ್ವಾಮಿ ಶಿವಾನುಭವ ಚರ ಮೂರ್ತಿ ಶಿವರುದ್ರ ಮಹಾಸ್ವಾಮೀಜಿ, ಬೇಲಿ ಮಠ, ಬೆಂಗಳೂರು ಹಾಗೂ ಪೂಜ್ಯ ಸ್ವಾಮಿ ಆತ್ಮಪ್ರಿಯಾನಂದಜಿ, ಉಪಕುಲಪತಿಗಳು, ರಾಮಕೃಷ್ಣ ಮಿಷನ್ ವಿವೇಕಾನಂದ ವಿಶ್ವವಿದ್ಯಾನಿಲಯ, ಬೇಲೂರು ಮಠ – ಇವರಿಬ್ಬರು ಈ ವಿಚಾರದ ಹಲವು ಆಯಾಮಗಳನ್ನು ಸಭಿಕರ ಮುಂದೆ, ಪ್ರಭಾವಶಾಲಿಯಾಗಿ ತೆರೆದಿಟ್ಟರು. ಭಾರತದ ಆಧ್ಯಾತ್ಮಿಕ ಸಂಸ್ಕೃತಿಯ ಪುನರುತ್ಥಾನ ಮತ್ತು ಹಿಂದೂಧರ್ಮದ ಪುನರುಜ್ಜೀವನಕ್ಕಾಗಿ ಅನುಷ್ಠಾನ ವಿಧಾನಗಳ ಬಗ್ಗೆ ಅವರುಗಳು ಮಾಡಿದ ಪ್ರವಚನಗಳು ಉದ್ಬೋಧಕವಾಗಿದ್ದವು.

ಎರಡನೆಯ ಅಧಿವೇಶನದ ವಿಷಯ **'ಆಧ್ಯಾತ್ಮಿಕ ಅರಿವು ಮತ್ತು ಪರಸ್ಪರ ಸಹಕಾರ'** ಎಂಬುದಾಗಿತ್ತು. ಇದರ ಅಧ್ಯಕ್ಷತೆಯನ್ನು ಹಿರಿಯ ಯತಿಗಳಾದ ಪೂಜ್ಯ ಸ್ವಾಮಿ ಜಗದಾತ್ಮಾನಂದಜಿ ಅವರು ವಹಿಸಿದ್ದರು. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿ, ಜ್ಞಾನಯೋಗಾಶ್ರಮ, ಬಿಜಾಪುರ, ಪೂಜ್ಯ ಸ್ವಾಮಿ ಬ್ರಹ್ಮಾನಂದಜಿ, ಚಿನ್ಮಯ ಮಿಷನ್, ಬೆಂಗಳೂರು ಮತ್ತು ಪೂಜ್ಯ ಸ್ವಾಮಿ ನಿಖಿಲೇಶ್ವರಾನಂದಜಿ, ರಾಮಕೃಷ್ಣ ಮಿಷನ್, ವಡೋದರಾ – ಇವರುಗಳು ಹಿಂದೂ ಧರ್ಮದ ಐಕ್ಯತೆ, ಅದಕ್ಕಾಗಿ ಶಾಸ್ತ್ರಗಳ ಮತ್ತು ಸಂತರ ಉಪದೇಶಗಳ ಆವಶ್ಯಕತೆ ಮತ್ತು ಸ್ವಾಮಿ ವಿವೇಕಾನಂದರು ಕಂಡಂತೆ ಸನಾತನ ಧರ್ಮದ ಆಂತರಿಕ ಸಾಮರಸ್ಯ ಎಂಬ ಪ್ರಮುಖ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಬಹು ಸುಂದರವಾಗಿ ಪ್ರಸ್ತುತಪಡಿಸಿದರು.

**'ಸಮಾಜ ಸೇವಾಕೇಂದ್ರಗಳಾಗಿ ನಮ್ಮ ದೇವಾಲಯಗಳು'** ಎಂಬ ವಿಷಯದ ಬಗ್ಗೆ ನಡೆದ ಮೂರನೆಯ ಅಧಿವೇಶನದ ಅಧ್ಯಕ್ಷತೆಯನ್ನು ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠದ ಪೂಜ್ಯ ಶ್ರೀ ಶಂಕರ ಭಾರತೀ ಮಹಾಸ್ವಾಮಿಗಳು ವಹಿಸಿದ್ದರು. ಇದರಲ್ಲಿ ಭಾಗವಹಿಸಿದ್ದ ದೆಹಲಿ ರಾಮಕೃಷ್ಣ ಮಿಷನ್‌ನ ಪೂಜ್ಯ ಸ್ವಾಮಿ ಶಾಂತಾತ್ಮಾನಂದಜಿ ಅವರು ಜ್ಞಾನಪ್ರಸಾರ ಮತ್ತು ಆಧ್ಯಾತ್ಮಿಕ ಜಾಗೃತಿಯ ಕೇಂದ್ರಗಳಾಗಿ ದೇವಾಲಯಗಳ ಪಾತ್ರದ ಬಗ್ಗೆ ಮಾತನಾಡಿದರು. ತುಮಕೂರಿನ ರಾಮಕೃಷ್ಣ–ವಿವೇಕಾನಂದ ಆಶ್ರಮದ ಪೂಜ್ಯ ಸ್ವಾಮಿ ವೀರೇಶಾನಂದ ಸರಸ್ವತಿ ಅವರು ಸಮುದಾಯ ಸೇವೆಯ ಬಗ್ಗೆ ಶ್ರೀರಾಮಕೃಷ್ಣರು ಬೋಧಿಸಿದ ಆದರ್ಶದ ಬಗ್ಗೆ ತಿಳಿಹೇಳಿದರು. ಹಾಗೂ ಕೇರಳದ ಕಾನಂಗಾಡಿನ ಪೂಜ್ಯ ಸ್ವಾಮಿ ಮುಕ್ತಾನಂದಜಿ ಅವರು ಧರ್ಮದ ರಕ್ಷಣೆಗೆ, ಅದರ ಅರಿವು ಮತ್ತು ಅನುಷ್ಠಾನಗಳು ಅವಶ್ಯಕ ಎಂಬ ವಿಷಯವನ್ನು ಒತ್ತಿ ಹೇಳಿದರು. ಇದೇ ಸಂದರ್ಭದಲ್ಲಿ **'ಧರ್ಮಶಿಕ್ಷಣ ಮತ್ತು ಸೇವಾಕೇಂದ್ರಗಳಾಗಿ ದೇವಾಲಯಗಳು'** ಎಂಬ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಇಂದಿನ ನಾಲ್ಕನೆಯ ಅಧಿವೇಶನದಲ್ಲಿ **'ಹಿಂದೂಧರ್ಮದ ಭವಿಷ್ಯ'** ಎಂಬ ವಿಷಯವನ್ನು ಕುರಿತು ಚರ್ಚಿಸಲಾಯಿತು. ಬೆಳಗಾವಿಯ ರಾಮಕೃಷ್ಣ ಮಿಷನ್ ಮುಖ್ಯಸ್ಥರಾದ ಸ್ವಾಮಿ ರಾಘವೇಶಾನಂದಜಿ ಅವರು ಅಧ್ಯಕ್ಷತೆ ವಹಿಸಿದ್ದ ಈ ಅಧಿವೇಶನದಲ್ಲಿ, ಪೂಜ್ಯ ಸ್ವಾಮಿ ನಿತ್ಯಸ್ಥಾನಂದಜಿ, ಆಚಾರ್ಯರು, ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರ, ಬೇಲೂರು ಮಠ, ಪೂಜ್ಯ ಸ್ವಾಮಿ ನಿರ್ಭಯಾನಂದ ಸರಸ್ವತಿ, ರಾಮಕೃಷ್ಣ–ವಿವೇಕಾನಂದ ಆಶ್ರಮ, ಗದಗ–ಬಿಜಾಪುರ ಹಾಗೂ ಪೂಜ್ಯ ಸ್ವಾಮಿ ನಿರ್ಮಲಾನಾಥಾನಂದ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಮಠ ಪ್ರವಚನಗಳನ್ನು ನೀಡಿದರು. ಇವರು ಕ್ರಮವಾಗಿ, ಜೀವನ ಸಾರ್ಥಕತೆಯ ಮಾರ್ಗವಾಗಿ ಹಿಂದೂಧರ್ಮ, ಜನಸಾಮಾನ್ಯರಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಅರಿವನ್ನು




ಎರಡನೆಯ ಅಧಿವೇಶನ

ಮೂಡಿಸುವುದು ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನಗಳ ಸವಾಲುಗಳನ್ನು ಎದುರಿಸುವಲ್ಲಿ ಹಿಂದೂಧರ್ಮಕ್ಕಿರುವ ಆಂತರಿಕ ಸಾಮರ್ಥ್ಯ – ಇವುಗಳ ಬಗ್ಗೆ ಅರಿವನ್ನು ಉಂಟುಮಾಡಿದರು.

ಅಂದಿನ ಸಂಜೆ, ರಾಮಕೃಷ್ಣ ಮಹಾಸಂಘದ ಸಂಗೀತಜ್ಞ ಸಂನ್ಯಾಸಿಗಳು **'ವಿವೇಕ ಸಂಗೀತ ಸುಧಾ'** ಎಂಬ ವಿಶಿಷ್ಟ ಗಾನ ಕಾರ್ಯಕ್ರಮದ ಮೂಲಕ ವಿವೇಕಾನಂದರಿಗೆ ತಮ್ಮ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಭಕ್ತಿ–ಗಾನಮಾಧುರ್ಯಗಳಿಂದ ಕೂಡಿದ ಈ ಕಾರ್ಯಕ್ರಮವು ಹೃದಯಂಗಮವಾಗಿತ್ತು.




ವಿವೇಕ ಸಂಗೀತ ಸುಧಾ



ಮೂರನೆಯ ಅಧಿವೇಶನ

## ೨೨.೪.೨೦೧೨ :
## ಮೂರನೆಯ ದಿನದ ಕಾರ್ಯಕ್ರಮ

ಇಂದಿನ ದಿನವನ್ನು 'ಭಾರತೀಯ ಆಧ್ಯಾತ್ಮಿಕ ಸಮ್ಮಿಲನ' ವೆಂಬ ಕಲಶಕ್ಕೆ ತೊಡಿಸಿದ್ದ ರತ್ನದಂತೆ ಇದ್ದ ದಿನವೆಂದು ಕರೆಯ ಬಹುದು. ಮೈಸೂರು ಅರಮನೆಯ ಪ್ರಾಂಗಣದಲ್ಲಿ ನಡೆದ **'ವಿವೇಕ ಪಾದಸ್ಪರ್ಶ ಸ್ಮರಣ'** ಸಮಾರಂಭದೊಡನೆ ಮುಕ್ತಾಯ ಗೊಂಡ ಈ ದಿನವು ಸ್ವಾಮಿ ವಿವೇಕಾನಂದರ ಭಕ್ತರ ಪಾಲಿಗೆ ಚಿರಸ್ಮರಣೀಯವಾದ ಸಂದರ್ಭವಾಗಿ ಪರಿಣಮಿಸಿತು.

ಇಂದಿನ ಬೆಳಗ್ಗೆ ವಿವೇಕಾನಂದ ಸಭಾಂಗಣದಲ್ಲಿ ಆರತಿ, ಭಜನೆಯ ಜೊತೆಗೆ ಅನುಷ್ಠಾನ ಧರ್ಮದ ಪಠಣ ಕಾರ್ಯಕ್ರಮ ನಡೆಯಿತು. ಈ ದಿನದ ಮೊದಲ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದವರು, ಕಡಪಾದಲ್ಲಿರುವ ರಾಮಕೃಷ್ಣ ಮಠದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಆತ್ಮವಿದಾನಂದಜಿ ಅವರು. ಈ ಅಧಿವೇಶನದ ವಿಷಯ **'ಜನಸಾಮಾನ್ಯರಿಗೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣವನ್ನು ನೀಡುವ ವಿಧಾನಗಳು'** ಎಂದು. ಮಾತಾ ಅಮೃತಾ ನಂದಮಯಿ ಮಠದ ಪೂಜ್ಯ ಸ್ವಾಮಿ ಅಮೃತಗೀತಾನಂದ ಪುರಿ ಅವರು ಜನಸಮಾನ್ಯರಿಗೆ ಭಾರತೀಯ ಸಂಸ್ಕೃತಿಯ ಸಾರವನ್ನು ತಿಳಿಸಿಕೊಡುವ ವಿಧಾನಗಳ ಬಗ್ಗೆ ಮಾತನಾಡಿದರು. ಕೊಯ ಮತ್ತೂರಿನ ರಾಮಕೃಷ್ಣ ಮಿಷನ್ ವಿದ್ಯಾಲಯದ ಕಾರ್ಯದರ್ಶಿ ಗಳಾದ ಪೂಜ್ಯ ಸ್ವಾಮಿ ಅಭಿರಾಮಾನಂದಜಿ ಅವರು ಯುವ ಪೀಳಿಗೆಗೆ ಭಾರತೀಯ ಸಂಸ್ಕೃತಿಯನ್ನು ಬೋಧಿಸುವ ಉಪಾಯದ ಬಗ್ಗೆ ಅರಿವು ಮೂಡಿಸಿದರು. ಉದಕಮಂಡಲದಲ್ಲಿರುವ ರಾಮ ಕೃಷ್ಣ ಮಠದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಸುಖಾತ್ಮಾನಂದಜಿ ಅವರು ಸನಾತನ ಧರ್ಮವು ಪ್ರಗತಿಪರ ಹಾಗೂ ಶಾಂತಿಯುತ ಸಮಾಜಕ್ಕೆ ಸಹಾಯಕವಾಗುವ ನೈತಿಕ ಮೌಲ್ಯಗಳ ಆಗರವಾಗಿದೆ ಎಂಬ ಅಂಶವನ್ನು ಒತ್ತಿ ಹೇಳಿದರು.

ಎರಡನೆಯ ಅಧಿವೇಶನವು **'ಸನಾತನ ಧರ್ಮ ಮತ್ತು ದಿವ್ಯತ್ರಯರು'** ಎಂಬ ವಿಷಯಕ್ಕೆ ಮುಡಿಪಾಗಿತ್ತು. ಮುಂಬೈ ರಾಮ ಕೃಷ್ಣಮಠದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಸರ್ವಲೋಕಾನಂದಜಿ ಅವರು ಈ ಅಧಿವೇಶನದ ನೇತೃತ್ವವನ್ನು ವಹಿಸಿದ್ದರು. ಮಂಗ ಳೂರಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಜಿತ ಕಾಮಾನಂದಜಿ ಅವರು ಗೃಹಸ್ಥಜೀವನದಲ್ಲಿ ಆಧ್ಯಾತ್ಮಿಕತೆಯನ್ನು ಅಳವಡಿಸಿಕೊಳ್ಳುವ ಬಗೆಯನ್ನು ಶ್ರೀಮಾತೆ ಶಾರದಾದೇವಿಯವರಿಂದ ಕಲಿತುಕೊಳ್ಳುವ ವಿಧಾನವನ್ನು ಮಾರ್ಮಿಕವಾಗಿ ತಿಳಿಸಿಕೊಟ್ಟರು. ಕೇರಳದ ಹರಿಪಾಡಿನಲ್ಲಿರುವ ರಾಮಕೃಷ್ಣ ಮಠದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ವೀರಭದ್ರಾನಂದಜಿ ಅವರು ಭಗವದ್ಗೀತೆ ಮತ್ತು ಸ್ವಾಮಿ ವಿವೇಕಾನಂದರ ಕರ್ಮಯೋಗದ ಸಂದೇಶವನ್ನು ಹೃದಯಸ್ಪರ್ಶಿಯಾಗಿ ಮನವರಿಕೆ ಮಾಡಿಕೊಟ್ಟರು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಸ್ವಾಮಿ ವೀರೇಶಾನಂದರು, ಶ್ರೀರಾಮ ಕೃಷ್ಣರಲ್ಲಿ ಋಷಿ ಆದರ್ಶವು ಪ್ರಕಟವಾದ ಬಗೆ ಮತ್ತು ಅದು ಹೇಗೆ ಗೃಹಸ್ಥರಿಗೆ ಮಾದರಿಯಾಗಿದೆ ಎನ್ನುವುದರ ಬಗ್ಗೆ ಹೇಳಿದರು.

ಮೂರನೆಯ ಅಧಿವೇಶನದ ವಿಷಯ **'ಭಾರತೀಯ ಸಂಸ್ಕೃತಿಯ ಚಿಂತನೆಗಳ ಪ್ರಸಾರದಲ್ಲಿ ಎದುರಿಸಬೇಕಾದ ಸಮಸ್ಯೆ ಗಳು'.** ಈ ಅಧಿವೇಶನದ ಅಧ್ಯಕ್ಷತೆಯನ್ನು ಪೂಜ್ಯ ಶ್ರೀ ಗುರುಶಿವ ಸುಜ್ಞಾನಮೂರ್ತಿ ಮಹಾಸ್ವಾಮಿಗಳು, ಶ್ರೀ ವಿಶ್ವಕರ್ಮ ಜಗದ್ಗುರು ಶ್ರೀ ಸುಜ್ಞಾನ ಪೀಠ, ಅರೆಮಾದನಹಳ್ಳಿ, ಹಾಸನ – ಇವರು ವಹಿಸಿದ್ದರು. ಪೂಜ್ಯ ಸ್ವಾಮಿ ಆತ್ಮಶ್ರದ್ಧಾನಂದಜಿ, ಸಂಪಾದಕರು, 'ವೇದಾಂತ ಕೇಸರಿ' ಮಾಸಪತ್ರಿಕೆ, ಶ್ರೀರಾಮಕೃಷ್ಣ ಮಠ, ಚೆನ್ನೈ ಮತ್ತು ಪೂಜ್ಯ ಸ್ವಾಮಿ ಬೋಧಮಯಾನಂದಜಿ, ರಾಮಕೃಷ್ಣ ಮಠ, ಹೈದರಾಬಾದ್ ಇವರು ಕ್ರಮವಾಗಿ ಸಮೂಹಮಾಧ್ಯಮಗಳ ಮೂಲಕ ಆಧ್ಯಾತ್ಮಿಕ ಸಂಸ್ಕೃತಿಯ ಪ್ರಸಾರ ಹಾಗೂ ಧಾರ್ಮಿಕ ಅವನತಿಯನ್ನು ತಡೆಯಲು ಶ್ರೀರಾಮಕೃಷ್ಣ–ವಿವೇಕಾನಂದರ ಚಿಂತನೆಗಳಿಂದ ಪಡೆಯಬಹುದಾದ ಪರಿಹಾರ – ಈ ವಿಷಯಗಳ ಬಗ್ಗೆ ಮಾತನಾಡಿದರು.


ಅನಾವರಣಗೊಂಡ ವಿವೇಕಸ್ಮಾರಕ



ಸ್ಮಾರಕದ ಉದ್ಘಾಟನೆ



ಸಂಜೆಯ ಶೋಭಾಯಾತ್ರೆ

ಅಂದು ಸಂಜೆ ೪–೧೫ರ ಹೊತ್ತಿಗೆ ಎಲ್ಲ ಸಾಧು, ಬ್ರಹ್ಮಚಾರಿಗಳು ಮತ್ತು ಭಕ್ತರು ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ **ವಿವೇಕಸ್ಮಾರಕ**ದ (ನಿರಂಜನ ಮಠ ಎನ್ನುವುದು ಹಿಂದಿನ ಹೆಸರು) ಸಮೀಪ ಸೇರಿದರು. ಸ್ವಾಮಿ ವಿವೇಕಾನಂದರು ಮೈಸೂರಿಗೆ ಬಂದಾಗ ಈ ಕಟ್ಟಡದಲ್ಲಿ ತಂಗಿ ಅದನ್ನು ಪುನೀತವನ್ನಾಗಿ ಮಾಡಿದ್ದಾರೆ. ಅದನ್ನು ಕರ್ನಾಟಕ ಸರ್ಕಾರದವರು ಜೀರ್ಣೋದ್ಧಾರ ಮಾಡಿ, ಮೈಸೂರಿನ ಜನತೆಗೆ ಮತ್ತು ಸ್ವಾಮಿ ವಿವೇಕಾನಂದರ ಅನುಯಾಯಿಗಳಿಗೆ ಆನಂದವನ್ನುಂಟುಮಾಡಿದ್ದಾರೆ. ಇದರ ಅಧಿಕೃತ ಉದ್ಘಾಟನೆಯನ್ನು, ನೆರೆದಿದ್ದ ನೂರಾರು ಜನ ಸಾಧುಗಳು ಮತ್ತು ಭಕ್ತರ ಹರ್ಷೋದ್ಗಾರಗಳ ನಡುವೆ, ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದ ಗೌಡ ಅವರು ನೆರವೇರಿಸಿದರು. ಸ್ವಾಮಿ ವಿವೇಕಾನಂದರು ಮೈಸೂರಿಗೆ ಭೇಟಿಕೊಟ್ಟ ಸಂದರ್ಭದ ಪುಣ್ಯಸ್ಮೃತಿಯಾಗಿ ಅವರಿಗೊಂದು ಚಿರಸ್ಥಾಯಿಯಾದ ಸ್ಮಾರಕವೊಂದರ ಕನಸು ನನಸಾಗಿರುವುದು ಮೈಸೂರಿನ ಸಮಸ್ತ ಜನತೆಯ ಸೌಭಾಗ್ಯವೆಂದೇ ಹೇಳಬೇಕು.

ಅನಂತರ, ಸಾಧುಗಳು ಮತ್ತು ಭಕ್ತರ ಬೃಹತ್ ಶೋಭಾಯಾತ್ರೆಯು ಮೈಸೂರು ಅರಮನೆಯ ಪ್ರಾಂಗಣಕ್ಕೆ ತೆರಳಿತು. ಮಂಗಳವಾದ್ಯಗಳ ಸುಮಧುರ ನಿನಾದದೊಂದಿಗೆ ಸ್ವಾಮಿ ವಿವೇಕಾನಂದರ ಎರಡು ಪ್ರತಿಮೆಗಳ ಮೆರವಣಿಗೆ ಮೈಸೂರಿನ ಮುಖ್ಯ ಬೀದಿಗಳಲ್ಲಿ ವೈಭವಪೂರ್ವಕವಾಗಿ ಸಾಗಿತು. ಇನ್ನೊಂದು ವಿಶೇಷವೆಂದರೆ, ಸಾಂಪ್ರದಾಯಿಕ ಕುದುರೆ ಸಾರೋಟಿನಲ್ಲಿ ಆಶ್ರಮದ ಹಿರಿಯ ಸ್ವಾಮೀಜಿಯವರುಗಳು ಮೆರವಣಿಗೆಯಲ್ಲಿ ಸಾಗಿ ಬಂದದ್ದು. ಸುಮಾರು ೫.೪೫ಕ್ಕೆ ಮೈಸೂರು ಅರಮನೆಯನ್ನು ತಲುಪಿದ ಎಲ್ಲರಿಗೂ ಅಲ್ಪಾಹಾರವನ್ನು ನೀಡಲಾಯಿತು. ಸುಮಾರು ೬–೧೫ರ ಹೊತ್ತಿಗೆ ಮುಖ್ಯ ಸಮಾರಂಭ ಅರಮನೆಯ ಪ್ರಾಂಗಣದಲ್ಲಿ ಆರಂಭವಾಯಿತು. ಈ ಸಮಾರಂಭವನ್ನು ಸ್ವಾಮಿ ವಿವೇಕಾನಂದರ ಭೇಟಿಯ ನೆನಪಿಗಾಗಿ, **'ವಿವೇಕ ಪಾದಸ್ಪರ್ಶ ಸ್ಮರಣ ಸಮಾರಂಭ'** ಎಂದು ಔಚಿತ್ಯಪೂರ್ಣವಾಗಿಯೇ ಹೆಸರಿಸಲಾಗಿತ್ತು. ಇದರ ಅಧ್ಯಕ್ಷತೆಯನ್ನು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಪ್ರಭಾನಂದಜಿ ಅವರು ವಹಿಸಿದ್ದರು. ಮೈಸೂರು ಆಶ್ರಮದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಮುಕ್ತಿದಾನಂದಜಿ ಅವರು ಪರಿಚಯ ಭಾಷಣ ಮಾಡಿದರು. ಅನಂತರ, ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದ ಗೌಡ, ಸಚಿವರಾದ ಶ್ರೀ ಎಸ್. ಎ. ರಾಮದಾಸ್, ರಾಮಕೃಷ್ಣ ಮಿಷನ್ನಿನ ಟ್ರಸ್ಟಿಗಳಾದ ಪೂಜ್ಯ ಸ್ವಾಮಿ ಗೌತಮಾನಂದಜಿ, ಹಿರಿಯ ಸಾಹಿತಿಗಳಾದ ಡಾ. ಪ್ರಭುಶಂಕರ ಮತ್ತು ಡಾ.ಹಂ.ಪಾ.ನಾಗರಾಜಯ್ಯ ಭಾಷಣಗಳನ್ನು ಮಾಡಿದರು. ಮುಖ್ಯಮಂತ್ರಿಗಳ ಭಾಷಣದ ತಿರುಳು ಹೀಗಿತ್ತು: "ನೂರಾರು ಸಮಸ್ಯೆಗಳಿಂದ ನಮ್ಮ ದೇಶ ಬಳಲುತ್ತಿದೆ. ಇದಕ್ಕೆ ಕಾರಣ ನಾವು ಸ್ವಾಮಿ ವಿವೇಕಾನಂದರ ಸಂದೇಶ–ವಿಚಾರಧಾರೆಗಳಿಂದ ವಿಮುಖ




ಅರಮನೆಯ ಪ್ರಾಂಗಣದಲ್ಲಿ ಭವ್ಯ ಸಮಾರಂಭ



ಅರಮನೆಯ ಪ್ರಾಂಗಣದಲ್ಲಿ ಕಿಕ್ಕಿರಿದ ಜನಸ್ತೋಮ



ಲೇಸರ್ ಪ್ರದರ್ಶನದ ವೈಭವದ ದೃಶ್ಯಗಳು



ರಾಗಿರುವುದು. ಪ್ರತಿಯೊಬ್ಬ ಭಾರತೀಯನೂ ಈ ವೀರಸಂನ್ಯಾಸಿಯ ಆದರ್ಶಗಳನ್ನು ಮೈಗೂಡಿಸಿಕೊಂಡರೆ, ಸಾಮಾಜಿಕ ಶಕ್ತಿ ಉತ್ಪನ್ನವಾಗುತ್ತದೆ. ಆ ಶಕ್ತಿಯನ್ನು ಸಮಾಜದ ಒಳಿತಿಗೆ ಧಾರೆಯೆರೆಯಬೇಕು. ಸಾಮಾಜಿಕ ವ್ಯವಸ್ಥೆ ಶಿಥಿಲಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಬರಿಯ ಕಾನೂನು–ಕಟ್ಟಲೆಗಳಿಂದ ಹೊಸತನ ತರಲು ಸಾಧ್ಯವಿಲ್ಲ. ಇದಕ್ಕೆ ಸ್ವಾಮಿ ವಿವೇಕಾನಂದರ ಅಧ್ಯಾತ್ಮ ಸ್ಪರ್ಶವೊಂದೇ ಪರಿಹಾರ." ಈ ಸಮಾರಂಭದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಮೇಯರ್ ಆದ ಶ್ರೀಮತಿ ಪುಷ್ಪಲತಾ ಚಿಕ್ಕಣ್ಣ, ಮಾಜಿ ಮಂತ್ರಿ ಶ್ರೀ ವಿಜಯ ಶಂಕರ್, ಶಾಸಕರಾದ ಶಂಕರಲಿಂಗೇಗೌಡ ಮುಂತಾದವರು ಉಪಸ್ಥಿತರಿದ್ದರು.

ಸಮಾರಂಭದ ಕೊನೆಗೆ ಒಂದು ವಿಶೇಷ ಲೇಸರ್ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಕರ್ನಾಟಕ ಸಂಸ್ಕೃತಿಯ ಚಾರಿತ್ರಿಕ ವೈಭವ, ಮೈಸೂರು ರಾಜವಂಶಸ್ಥರ ಸಾಧನೆ ಮತ್ತು ಸ್ವಾಮಿ ವಿವೇಕಾನಂದರ ಜೀವನ ಹಾಗೂ ಸಂದೇಶಗಳನ್ನು ಚಿತ್ರವತ್ತಾಗಿ, ಆಕರ್ಷಕರೀತಿಯಲ್ಲಿ, ಮನಸ್ಸನ್ನು ರಂಜಿಸುವಂತೆ ಬಿಂಬಿಸಲಾಗಿತ್ತು.

ಒಟ್ಟಿನಲ್ಲಿ ಇಡೀ ಸಮಾರಂಭ, ಮೈಸೂರು ನಗರವು ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಸಂದರ್ಭದಲ್ಲಿ, ಅವರಿಗೆ ನೀಡಿದ ಗೌರವಾರ್ಪಣೆಯ ಶುಭಸಂದರ್ಭವಾಗಿ ಚಿರಸ್ಮರಣೀಯವಾಯಿತು; ನೆರೆದಿದ್ದ ಎಲ್ಲರ ಮನಸ್ಸು ಮತ್ತು ಹೃದಯಗಳನ್ನು ಸೂರೆಗೊಂಡು, **'ವಿವೇಕಾನಂದ ಭಾವ'**ದಲ್ಲಿ ತನ್ಮಯರನ್ನಾಗಿಸಿತು; ಸಭಿಕರಲ್ಲಿ ತುಂಬ ಉತ್ಸಾಹ ಮತ್ತು ಧನ್ಯತಾಭಾವಗಳನ್ನು ಉಂಟುಮಾಡಿತು.




ಸಾಧು ಸಮಾವೇಶದ ಪುಣ್ಯ ಸಂದರ್ಭ

## ೨೩.೪.೨೦೧೨ : ನಾಲ್ಕನೆಯ ದಿನದ ಕಾರ್ಯಕ್ರಮಗಳು

ಕಡೆಯ ದಿನವಾದ ಇಂದು ಮೂರು ಮುಖ್ಯ ಕಾರ್ಯಕ್ರಮಗಳು ನಡೆದವು: **೧. ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಜರುಗಿದ 'ಸಾಧು ಸಮಾವೇಶ' ೨. ಅದೇ ಸಮಯದಲ್ಲಿ 'ದೂರದರ್ಶಿತ್ವದ ಧ್ಯೇಯ' ಎಂಬ ಹೆಸರಿನ ಸ್ವಾಮಿ ವಿವೇಕಾನಂದರ ಆದರ್ಶ ಮತ್ತು ವಿಚಾರಗಳಿಂದ ಸ್ಫೂರ್ತಿಗೊಂಡವರ ಅನುಭವಗಳ ವಿನಿಮಯ** ಮತ್ತು ೩. **ಸಮಾರೋಪ ಸಮಾರಂಭ.**

ಬೆಳಗ್ಗೆ ಮುಂಜಾನೆಯೇ ನೂರಾರು ಸಂಖ್ಯೆಯಲ್ಲಿ ವಿವಿಧ ಸಂಪ್ರದಾಯಗಳಿಗೆ ಸೇರಿದ ಸುಮಾರು ೨೦೦ ಸಾಧು, ಬ್ರಹ್ಮಚಾರಿಗಳು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ನೆರೆದಿದ್ದರು. ವೇದಘೋಷದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಅನಂತರ, ಸ್ವಾಮಿ ವಿವೇಕಾನಂದರಿಂದ ರಚಿತವಾದ, ಶ್ರೀ ಕುವೆಂಪು ಅನುವಾದಿಸಿರುವ 'ಸಂನ್ಯಾಸಿ ಗೀತೆ'ಯನ್ನು ಹಾಡಲಾಯಿತು. 'ಜೈ ಶಿವ ಓಂಕಾರ' ಗಾನದೊಂದಿಗೆ, ನೆರೆದಿದ್ದ ಎಲ್ಲ ಸಾಧುವರ್ಯರಿಗೆ ಶುಭ ಮಂಗಳಾರತಿಯನ್ನು ಬೆಳಗಲಾಯಿತು. ಆಮೇಲೆ, ಸಂನ್ಯಾಸದ ಬಗ್ಗೆ ಸ್ವಾಮಿ ವಿವೇಕಾನಂದರ ಮತ್ತು ಶಾಸ್ತ್ರಗ್ರಂಥಗಳ ಉಕ್ತಿಗಳ ಪಠಣ ನಡೆಯಿತು. ಇಂದಿನ ಸಾಮಾಜಿಕ ಪರಿಸ್ಥಿತಿಯ ಬಗೆಗಿನ ಮೂರು ಮುಖ್ಯ ವಿಷಯಗಳ ಬಗ್ಗೆ ವಿಚಾರ ವಿನಿಮಯ ನಡೆಯಿತು. ಅವುಗಳೆಂದರೆ, **೧. ಗ್ರಾಮಾಂತರ ಜನರಿಗೆ ಸಂಸ್ಕೃತಿ ಹಾಗೂ ಆಧ್ಯಾತ್ಮಿಕ ಜ್ಞಾನವನ್ನು ತಲುಪಿಸುವುದರಲ್ಲಿ ಸಂನ್ಯಾಸಿಗಳ ಪಾತ್ರ. ೨. ಹಿಂದೂಧರ್ಮವನ್ನು, ಅದರಲ್ಲೂ ಮುಖ್ಯವಾಗಿ ಹಿಂದೂಧರ್ಮದ ಸಂನ್ಯಾಸಿಗಳನ್ನು ಕುರಿತು ಸಮೂಹ ಮಾಧ್ಯಮಗಳ ಅವಹೇಳನಕಾರಿ ಧೋರಣೆಯ ಕಾರಣಗಳು ಮತ್ತು ಅದಕ್ಕೆ ಪರಿಹಾರ** ಹಾಗೂ **೩. ಈಗಿನ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಅಂತರರಾಷ್ಟ್ರೀಯ ಸನ್ನಿವೇಶದ ಹಿನ್ನೆಲೆಯಲ್ಲಿ ಸಂನ್ಯಾಸಿಗಳು ವಹಿಸಬೇಕಾದ ಪಾತ್ರ.**

ಪೂಜ್ಯ ಸ್ವಾಮಿ ಹರ್ಷಾನಂದಜಿ, ಪೂಜ್ಯ ಸ್ವಾಮಿ ಪ್ರಭಾನಂದಜಿ, ಪೂಜ್ಯ ಸ್ವಾಮಿ ಗೌತಮಾನಂದಜಿ, ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿ, ಪೂಜ್ಯ ಸ್ವಾಮಿ ರಾಘವೇಶಾನಂದಜಿ ಮೇಲಿನ ವಿಷಯಗಳ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಿದರು. ಎಲ್ಲ ಸಂನ್ಯಾಸಿ, ಬ್ರಹ್ಮಚಾರಿಗಳಿಗೂ ನೆನಪಿನ ಕೊಡುಗೆ, ರುದ್ರಾಕ್ಷಮಾಲೆಗಳನ್ನು ಇತ್ತು ಗೌರವಿಸಲಾಯಿತು. ಸಂನ್ಯಾಸಿ ವರ್ಗದ ಸಾತ್ವಿಕ ಶಕ್ತಿಯು ನಮ್ಮ ಸಮಾಜ ಎದುರಿಸುತ್ತಿರುವ ಭೀಕರ ಸಮಸ್ಯೆಗಳ ರೌದ್ರ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಜಯಶೀಲವಾಗಬಲ್ಲುದು ಎಂಬ ಧೈರ್ಯ ಮತ್ತು ಆತ್ಮ ವಿಶ್ವಾಸದ ಸಂಕಲ್ಪ ಅಂದು ಎಲ್ಲರಲ್ಲೂ ಮೂಡಿತು.

ಇದೇ ಸಮಯದಲ್ಲಿ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ **ಗೃಹೀಭಕ್ತರ ಸಮಾವೇಶ** ನಡೆಯುತ್ತಿತ್ತು. ಈ ಸಮಾವೇಶದ ಅಧ್ಯಕ್ಷತೆಯನ್ನು ಶ್ರೀ ಎಂ.ಎಸ್. ನಂಜುಂಡಯ್ಯ, ನಿವೃತ್ತ ಹಿರಿಯ ಸಲಹೆಗಾರರು, ವಿಶ್ವಬ್ಯಾಂಕ್ – ಇವರು ವಹಿಸಿದ್ದರು. ಶ್ರೀಮತಿ ಶಾಂತಲಾ ವಟ್ಟಂ ಅವರ ಭಕ್ತಿ ಸಂಗೀತದಿಂದ ಪ್ರಾರಂಭವಾದ ಈ ಕಾರ್ಯಕ್ರಮದಲ್ಲಿ ಹಿರಿಯ ಭಕ್ತರು, ಹಿತೈಷಿಗಳು ಮತ್ತು ಸಾಮಾಜಿಕ ಕಾರ್ಯಕರ್ತರು



ಸಾಧು ಸಮಾವೇಶದಲ್ಲಿ ನೆರೆದಿದ್ದ ಸಾಧುಗಳು



ಸನ್ಮಾನಿತರಾದ ಮಹನೀಯರು

ವಿವೇಕಾನಂದರ ಆದರ್ಶಗಳಿಂದ ತಾವು ಹೇಗೆ ಸ್ಫೂರ್ತಿಗೊಂಡಿದ್ದೇವೆ ಎಂಬ ವಿಚಾರವನ್ನು ಸಭಿಕರಲ್ಲಿ ಹಂಚಿಕೊಂಡರು. ಈ ವಿಚಾರವಾಗಿ ಮಾತನಾಡಿದ ಮಹನೀಯರೆಂದರೆ, ಡಾ. ಗುರುರಾಜ ಕರ್ಜಗಿ, ಡಾ. ಬಿ. ಬಾಲಸುಬ್ರಹ್ಮಣ್ಯಂ, ಡಾ. ಎಚ್. ಸುದರ್ಶನ್, ಶ್ರೀ ಜಿ.ಎಸ್. ಜಯದೇವ್, ಶ್ರೀ ಎನ್. ಎಸ್. ಚಕ್ರವರ್ತಿ, ಶ್ರೀ ಪಿ. ಗೋವಿಂದಪ್ಪ ಮತ್ತು ಶ್ರೀ ಚಕ್ರವರ್ತಿ ಸೂಲಿಬೆಲೆ. ಡಾ.ಪ್ರಭುಶಂಕರ ಈ ಸಮಾವೇಶದ ಪ್ರಧಾನ ಭಾಷಣವನ್ನು ಮಾಡಿದರು. ಇವರೆಲ್ಲರಿಗೂ ಆಶ್ರಮದ ವತಿಯಿಂದ ಗೌರವಾರ್ಪಣೆಯನ್ನು ಸಲ್ಲಿಸಲಾಯಿತು.

ಇದಾದನಂತರ, ಭಾರತೀಯ ಆಧ್ಯಾತ್ಮಿಕ ಸಮ್ಮಿಲನದ **ಸಮಾರೋಪ ಸಮಾರಂಭ** ನಡೆಯಿತು. ಉಡುಪಿ ಪೇಜಾವರ ಮಠಾಧೀಶರಾದ ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಇದರ ಅಧ್ಯಕ್ಷತೆಯನ್ನು ವಹಿಸಿದ್ದರು. ಪೂಜ್ಯ ಸ್ವಾಮಿ ಹರ್ಷಾನಂದಜಿ, ಪೂಜ್ಯ ಸ್ವಾಮಿ ಪ್ರಭಾನಂದಜಿ, ಸ್ವಾಮಿ ವಿಶ್ವಾತ್ಮಾನಂದಜಿ, ಸಂಯೋಜಕರು, ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಮಹೋತ್ಸವ ಸಮಿತಿ, ಬೇಲೂರು ಮಠ, ಪೂಜ್ಯ ಶ್ರೀ ಮಧುಸೂದನಾನಂದಜಿ, ಓಂಕಾರಾಶ್ರಮ, ಬೆಂಗಳೂರು, ಪೂಜ್ಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಅವಧೂತ ದತ್ತ ಪೀಠ, ಗಣಪತಿ ಸಚ್ಚಿದಾನಂದ ಆಶ್ರಮ, ಮೈಸೂರು – ಇವರುಗಳು ಆಶೀರ್ವಚನಗಳನ್ನು ನೀಡಿದರು.

ಇದೇ ಸಂದರ್ಭದಲ್ಲಿ ವಿವೇಕಾನಂದರ ಧ್ವನಿ ಇದ್ದಿರಬಹುದು ಎಂದು ಸಂಶೋಧಿಸಿ, ಕಂಡುಕೊಂಡ ಗಾನಮುದ್ರಿಕೆಯನ್ನು ಪೂಜ್ಯ ಸ್ವಾಮಿ ಪ್ರಭಾನಂದಜಿ ಅವರು ಬಿಡುಗಡೆ ಮಾಡಿದರು. ಇದಕ್ಕಾಗಿ ಶ್ರೀ ಎಂ.ಎಸ್. ನಂಜುಂಡಯ್ಯ ಅವರು ಬಹಳಷ್ಟು ಪರಿಶ್ರಮ ವಹಿಸಿದ್ದಾರೆ.

ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ತಮ್ಮ ಆಶೀರ್ವಚನದಲ್ಲಿ ಹೀಗೆ ಹೇಳಿದರು: "ಹಿಂದೂಧರ್ಮವು ಗಂಗಾನದಿಯಂತೆ ಪವಿತ್ರವಾದುದು. ಆದರೆ ಇತ್ತೀಚೆಗೆ ಅನೇಕ ಕೊಳಕುಗಳಿಂದ ಇದನ್ನು ಕಲುಷಿತ ಮಾಡಿದ್ದೇವೆ. ಇಂತಹ ಮಲಿನತೆಗಳಿಂದ ಹಿಂದೂಧರ್ಮವನ್ನು ಪರಿಶುದ್ಧಗೊಳಿಸಿ ನವ ಹಿಂದೂ ಸಮಾಜದ ನಿರ್ಮಾಣಕ್ಕೆ ನಾವೆಲ್ಲರೂ ದೃಢ ಸಂಕಲ್ಪ ಮಾಡಬೇಕು. ಶೈವ, ವೈಷ್ಣವ, ಶಾಕ್ತ, ಜೈನ, ಸಿಖ್, ಬೌದ್ಧ – ಇವು ಹಿಂದೂಧರ್ಮದ ಆರು ಮುಖಗಳು. ಅವು ಆರು ಮುಖಗಳಾದರೂ ಹೃದಯ ಒಂದೇ ಆಗಬೇಕು. **ದೇವನೊಬ್ಬ, ನಾಮ ಹಲವು** ಎನ್ನುವಂತೆ ಎಲ್ಲ ತೆರನಾದ ತಾತ್ತ್ವಿಕ ಭಿನ್ನತೆ ಮರೆತು, ಹಿಂದೂ ಸಮಾಜದಲ್ಲಿನ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವ ಮೂಲಕ, ಬಲಿಷ್ಠ ಸಮಾಜ ನಿರ್ಮಿಸಲು ಮುಂದಾಗೋಣ. ಸ್ವಾಮಿ ವಿವೇಕಾನಂದರು ಸನಾತನಧರ್ಮದ ಹಲವು ಸಂಕುಚಿತ ಭಾವನೆಗಳು ಹಾಗೂ ದೋಷಗಳ ಬಗ್ಗೆ ಕಟುವಾಗಿ ಟೀಕಿಸಿ, ಹಿಂದೂಧರ್ಮದ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವ ಬಗ್ಗೆ ನಮಗೆ ಎಚ್ಚರಿಕೆಯನ್ನು ಕೊಟ್ಟರು. ಹಿಂದೂ ಸಮಾಜದ ಧರ್ಮಜಾಗೃತಿಗೆ ಸ್ವಾಮಿ ವಿವೇಕಾನಂದರ ಕ್ರಾಂತಿಕಾರಕ ವಿಚಾರಗಳು ಮತ್ತು ಮಹಾನ್ ಕಾರ್ಯಗಳು ಸ್ಮರಣೀಯವಾದುವು. ಅವು ನಮಗೆಲ್ಲ ಸ್ಫೂರ್ತಿದಾಯಕ."

ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಹರ್ಷಾನಂದಜಿ ಅವರು ಹೀಗೆ ಹೇಳಿದರು: "ಜಾತಿಗಿಂತ ಧರ್ಮ ದೊಡ್ಡದು ಎಂಬ ಮನೋಭಾವದಿಂದ ಎಲ್ಲ ಸಂಪ್ರದಾಯಸ್ಥರೂ ಭಾವೈಕ್ಯತೆ ಸಾಧಿಸುವ ಮೂಲಕ ಸಮಾಜವನ್ನು ಒಟ್ಟುಗೂಡಿಸಬೇಕಾಗಿದೆ. ಹಿಂದೂ ಸಮಾಜದ ಒಳಗಿನ ಹಾಗೂ ಹೊರಗಿನ ಸಮಸ್ಯೆಗಳನ್ನು ಎದುರಿಸಲು ಸರ್ವಸಾಧಾರಣ ಪ್ರಣಾಳಿಕೆಯೊಂದನ್ನು ರೂಪಿಸುವ ಅಗತ್ಯವಿದೆ." ಸ್ವಾಮಿ ಮುಕ್ತಿದಾನಂದಜಿ



ಸಮಾರೋಪ ಸಮಾರಂಭ